ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿ.ಸಿ. ಸಂಖ್ಯೆ 35/2025</u>**

ಪ್ರ.ವ.ಬೋ.ತಾಃ 24-07-2026

ಚಾಸಾಃ 2 ಪ್ರಾಸಾಃ 2

| | |
|---|---|
| ಸಾಕ್ಷಿಯ ಹೆಸರು | ರಮಾದೇವಿ |
| ತಂದೆ/ಗಂಡನ ಹೆಸರು | ನರಸಿಂಹಮೂರ್ತಿ |
| ವಯಸ್ಸು | 22 ವರ್ಷ |
| ವೃತ್ತಿ | ಕೂಲಿ ಕೆಲಸ |
| ವಾಸ | ಕಸಿನಾಯಕನಹಳ್ಳಿ, ಮಧುಗಿರಿ ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ನನಗೆ ಆರೋಪಿತರು ಗೊತ್ತು. ಚಾಸಾ.1 ನನ್ನ ಮೈದುನ, ಚಾಸಾ.3 ನನ್ನ ನಾದಿನಿ, ಚಾಸಾ.4 ನನ್ನ ಚಿಕ್ಕಮ್ಮ, ಚಾಸಾ.5 ನನ್ನ ಅಕ್ಕನ ಮಗ, ಚಾಸಾ.6 ಗಂಡ. ಆರೋಪಿತರು ಎಂದೂ ಸಹ ಅಪರಾಧ ಎಸಗುವ ಸಮಾನ ಉದ್ದೇಶದಿಂದ ನಮ್ಮ ಮನೆಗೆ ಅಕ್ರಮ ಪ್ರವೇಶ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನನಗಾಗಲೀ, ಚಾಸಾ.1, 3 ರಿಂದ 5 ರವರಿಗಾಗಲೀ ಕೈಗಳಿಂದ, ದೊಣ್ಣೆಯಿಂದ ಹಲ್ಲೆ ಮಾಡಿ, ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯಪಡಿಸಿರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿರುವುದಿಲ್ಲ. ಅಲ್ಲದೇ ನಮ್ಮ ಮನೆಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿ ಯಾವುದೇ ನಷ್ಟ ಉಂಟು ಮಾಡಿರುವುದಿಲ್ಲ. ಈ ಸಂಬಂಧವಾಗಿ ನಾನಾಗಲೀ ಅಥವಾ ಚಾಸಾ.1, 3 ರಿಂದ 5 ರವರಾಗಲೀ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ. ಈಗ ತೋರುತ್ತಿರುವ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 183ರ ಅಡಿಯಲ್ಲಿ ನೀಡಲಾದ ಹೇಳಿಕೆಯಲ್ಲಿರುವ ಸಹಿ ನನ್ನದಾಗಿರುತ್ತದೆ, ಆ ಹೇಳಿಕೆಯನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಆ ದಿನ ಪೊಲೀಸರು ಹೇಳಿದಂತೆ ನಾನು ಮಾನ್ಯ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೆನೆ. ಆದರೆ ನ್ಯಾಯಾಲಯದ ಮುಂದೆ ನೀಡಲಾದ ಅಂಶಗಳು ಸತ್ಯವಾಗಿರುತ್ತವೆ. ನ್ಯಾಯಾಲಯದ ಮುಂದಿರುವ ಇಟ್ಟಿಗೆ ಚೂರು, ಗಾಜಿನ ಚೂರು ಮತ್ತು ದೊಣ್ಣೆಗಳನ್ನು ಯಾವ ಉದ್ದೇಶಕ್ಕಾಗಿ ಅಮಾನತ್ತುಪಡಿಸಿಕೊಂಡರು ಎಂಬುದು ನನಗೆ ಗೊತ್ತಿಲ್ಲ. ಈ ಸಂಬಂಧವಾಗಿ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>- ಮಾನ್ಯ ಸ.ಸ.ಅ. ರವರಿಂದಃ-**

ದಿಃ 15.12.2024 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ನಾನು ಹಾಗುಾ ಚಾಸಾ.1, 3 ರಿಂದ 5ರವರು ಮಾತನಾಡುತ್ತಾ ಕುಳಿತಿದ್ದಾಗ, ಆರೋಪಿತರು ಹಳೆಯ ದ್ವೇಷದ ಹಿನ್ನೆಲೆಯಲ್ಲಿ ನಮ್ಮ ಮನೆಗೆ ಅಕ್ರಮ ಪ್ರವೇಶ ಮಾಡಿ ನನ್ನ ಹಾಗೂ ಚಾಸಾ1, 3 ರಿಂದ 6ರವರನ್ನು ಅವಾಚ್ಯ ಶಬ್ದಗಳಿಂದ ಬೈದು, 1ನೇ ಆರೋಪಿ ನನಗೆ ಕಾಲಿನಿಂದ ಹೊಟ್ಟೆಗೆ ಒದ್ದು, ಕೈ

ಹಿಡಿದು ಎಳೆದಾಡಿ, ನನ್ನ ತಲೆಗೆ ಹೊಡೆದು ನೋವುಂಟುಪಡಿಸಿ, 2 ನೇ ಆರೋಪಿ ದೊಣ್ಣೆಯಿಂದ ಚಾಸಾ.3 ರವರ ತಲೆಗೆ ಹೊಡೆದು, 4 ನೇ ಆರೋಪಿ ಚಾಸಾ.4 ರವರಿಗೆ ದೊಣ್ಣೆಯಿಂದ ತಲೆಗೆ, ಎಡಗೈ, ಹಾಗೂ ಎಡಗಾಲಿನ ತೊಡೆಗೆ ಹೊಡೆದು, 1 ನೇ ಆರೋಪಿ ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಮತ್ತು ಎಡ ಮೊಣಕೈಗೆ ಹೊಡೆದು, 3 ನೇ ಆರೋಪಿ ಅದೇ ದೊಣ್ಣೆಯಿಂದ ಚಾಸಾ.5 ರವರ ತಲೆಗೆ ಹೊಡೆದು ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯವನ್ನುಂಟುಪಡಿಸಿ, ನಮ್ಮ ಮನೆಯ ಕಿಟಕಿ ಗಾಜುಗಳನ್ನು ಹೊಡೆದು ಸುಮಾರು ಒಂದು ಸಾವಿರ ನಷ್ಟಪಡಿಸಿದ್ದು, ಆರೋಪಿತರೆಲ್ಲರೂ ನನಗೆ, ಚಾಸಾ.1, 3 ರಿಂದ 6 ರವರಿಗೆ ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಾನು, ಚಾಸಾ.1, 3 ರಿಂದ 5 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆವು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಾನು ಮಾನ್ಯ ನ್ಯಾಯಾಧೀಶರ ಮುಂದೆ ನಿಪಿ.5 ರಂತಹ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 183 ರ ಅಡಿಯಲ್ಲಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ನ್ಯಾಯಾಲಯದ ಮುಂದಿರುವ ಇಟ್ಟಿಗೆ ಚೂರು ಮತ್ತು ದೊಣ್ಣೆಗಳಿಂದ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಅಲ್ಲಗಳೆದ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನಿಪಿ.6 ಮತ್ತು ನಿಪಿ.7 ಎಂದು ಗುರುತಿಸಲಾಯಿತು. ನಾನು, ಚಾಸಾ.1, 3 ರಿಂದ 6 ಹಾಗೂ ಆರೋಪಿತರು ನ್ಯಾಯಾಲಯದ ಹೊರಗೆ ರಾಜೀ

ಆಗಿದ್ದೇವೆ ಎಂದರೆ ಸರಿ. ಆ ಕಾರಣಕ್ಕಾಗಿ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ– ಆರೋಪಿತರ ಪರ ವಕೀಲರಿಂದಃ**– ಏನೂ ಇಲ್ಲ.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ